# ಸಾರ್ವಜನಿಕ ಗ್ರಂಥಾಲಯಗಳ ಅಂತ್ಯ ! *

**ಎಂ. ಎಸ್. ಶ್ರೀಧರ್**

**ಸಾರಾಂಶ:** ಗ್ರಂಥಾಲಯಗಳ ವಾರ್ಷಿಕ ವೆಚ್ಚ ಕಳೆದೊಂದು ವರ್ಷದಲ್ಲಿ ಗಣನೀಯವಾಗಿ ಹೆಚ್ಚಿದ್ದರೂ, ಓದುಗರ ಭೇಟಿ ಮತ್ತು ಪುಸ್ತಕಗಳ ಎರವಲು ಇಳಿಮುಖವಾಗಿರುವುದನ್ನು ದಾಖಲಿಸಿ ೨೦೨೦ರ ವೇಳೆಗೆ ಸಾರ್ವಜನಿಕ ಗ್ರಂಥಾಲಯಗಳು ಅನುಪಯುಕ್ತ/ ಅನಪೇಕ್ಷಿತವಾಗಲಿವೆ ಎಂಬ ಟಿಮ್ ಕೋಟೆಸ್‌ನ ವರದಿ ಗಮನಾರ್ಹ. ಹೀಗೆ ಇಳಿಮುಖಗೊಂಡ ಗ್ರಂಥಾಲಯ ಬಳಕೆಗೆ ಟಿವಿ, ಇಂಟರ್‌ನೆಟ್ ಮತ್ತಿತರ ಡಿಜಿಟಲ್ ಮಾಧ್ಯಮಗಳ ದಾಳಿಯನ್ನು ಕಾರಣವನ್ನಾಗಿಸಿದರೂ, ಗ್ರಂಥಾಲಯಗಳಲ್ಲಿ ಸಂಗೀತದ ಸಿ ಡಿ, ಅಂತರ್ಜಾಲ ಹಾಗೂ ಸ್ನೇಹಿತರೊಂದಿಗೆ ಚ್ಯಾಟ್ ಮಾಡುವುದು ಹೆಚ್ಚಿರುವುದರಿಂದ ಕೆಲವು ತುರ್ತು ಪರಿಹಾರಗಳನ್ನು ಸೂಚಿಸಿರುವ ಟಿಮ್‌ನ ವರದಿಯಿಂದ ಬೆರಗುಗೊಂಡ ಬ್ರಿಟೀಷರು ಸಾಕಷ್ಟು ಚರ್ಚೆ, ವಿವಾದಗಳನ್ನು ಹುಟ್ಟುಹಾಕಿದರು. ಕೆಲವರು ಈ ವರದಿಯನ್ನೇ ವಿರೋಧಿಸಿದರು. ಈ ಹಿನ್ನೆಲೆಯಲ್ಲಿ ಕರ್ನಾಟಕದ ಸಾರ್ವಜನಿಕ ಗ್ರಂಥಾಲಯಗಳ ಸ್ಥಿತಿಯನ್ನು ಗಮನಿಸಿದರೆ ಸದಸ್ಯತ್ವ, ಸಂಗ್ರಹ, ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಅಕ್ಷರಸ್ಥ ಜನಸಂಖ್ಯೆಯ ಶೇ ೧೫ ರಷ್ಟು ಮಂದಿ ಮಾತ್ರ ಸಾರ್ವಜನಿಕ ಗ್ರಂಥಾಲಯಗಳಿಗೆ ಭೇಟಿ ನೀಡುತ್ತಿದ್ದು, ಅವರಲ್ಲಿಯೂ ಹೆಚ್ಚಿನವರು ದಿನಪತ್ರಿಕೆ ಓದಲು ಹೋಗುತ್ತಾರೆ ಎಂಬುದು ಸಾರ್ವಜನಿಕ ಗ್ರಂಥಾಲಯಗಳ ಬಳಕೆ, ಭವಿಷ್ಯವನ್ನು ಪ್ರತಿಬಿಂಬಿಸುತ್ತದೆ. ಇಂತಹ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಕಂಪ್ಯೂಟರೀಕರಣ, ಡಿಜಿಟಲ್ ಗ್ರಂಥಾಲಯಗಳ ಬಗೆಗಿನ ಚರ್ಚೆ ಬಾಲಿಶವೆನಿಸುತ್ತದೆ. ಅಸಮರ್ಪಕ ಗ್ರಂಥಸಂಗ್ರಹಣೆ ಯಾವ ರೂಪದಲ್ಲಿಯೂ ಅಸ್ವೀಕೃತವಾಗಿಯೇ ಉಳಿಯುತ್ತದೆ. ಸರ್ಕಾರದ ಸಗಟು ಖರೀದಿಯೇ ಇದಕ್ಕೆ ಹೊಣೆಯಾಗಿದ್ದು ಇದು ಅನೇಕ ಗೊಂದಲ, ಚರ್ಚೆ, ಆರೋಪಗಳಿಗೆ ಸಿಕ್ಕಿ ಸಾರ್ವಜನಿಕ ಗ್ರಂಥಾಲಯಗಳ ಸೇವೆ ನಲುಗುತ್ತಿದೆ. ಸಬ್ಸಿಡಿ ರೂಪದ ಸಗಟು ಖರೀದಿಗಾಗಿ ಪ್ರಕಾಶಕರು ಪುಸ್ತಕ ಪ್ರಕಟಿಸುವ ಪೈಪೋಟಿಗಿಳಿದಿದ್ದಾರೆ. ಸಾರ್ವಜನಿಕ ಗ್ರಂಥಾಲಯಗಳು ಅಲ್ಪ ಪ್ರಮಾಣದ ಸದಸ್ಯತ್ವ, ಸೀಮಿತ ಗ್ರಾಹಕ ಬಳಕೆಯಿಂದ ಹೊರಬರುವಂತಾಗಬೇಕು. ಇದಕ್ಕಾಗಿ ಪುಸ್ತಕ ಆಯ್ಕೆಯನ್ನು ವಿಕೇಂದ್ರೀಕರಣಗೊಳಿಸಿ, ಸ್ಥಳೀಯ ಮಾರಾಟಗಾರರಿಂದಲೂ ಪುಸ್ತಕ ಖರೀದಿಸಿ, ಅರ್ಜಿ ಇಲ್ಲದೆಯೂ ಪುಸ್ತಕಗಳ ಆಯ್ಕೆ ನಡೆಯುವಂತಾಗಬೇಕು ಮತ್ತು ಸೇವಾ ಗುಣಮಟ್ಟ ಹೆಚ್ಚಿಸಬೇಕು. ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ಬ್ರಿಟೀಷ್ ಗ್ರಂಥಾಲಯದ ಪುಟ್ಟ ಶಾಖೆ, ಶುಲ್ಕ ವಿಧಿಸಿಯೂ ಪಡೆದಿರುವ ಸದಸ್ಯತ್ವ ಹಾಗೂ ಬಳಕೆಯ ಅಂಕಿ ಅಂಶಗಳು ಕಣ್ಣು ತೆರೆಸುವಂತಿವೆ. ಇದರೊಂದಿಗೆ ಸಾರ್ವಜನಿಕ ಗ್ರಂಥಾಲಯಗಳ ಸಂಗ್ರಹ, ಸೇವೆ, ಸದಸ್ಯತ್ವ, ಬಳಕೆಯ ಅಂಕಿ ಅಂಶಗಳ ವೈಜ್ಞಾನಿಕ ಮೌಲ್ಯಮಾಪನ ನಡೆದು ಸಮಸ್ಯೆಯ ಮೂಲವನ್ನು ಅರಿತು ಪರಿಹಾರೋಪಾಯಗಳನ್ನು ರೂಪಿಸಬೇಕಿದೆ.

**ಸೂಚಿಪದಗಳು:** ಸಾರ್ವಜನಿಕ ಗ್ರಂಥಾಲಯಗಳು, ಗ್ರಂಥಸಂಗ್ರಹಣೆ, ಗ್ರಂಥಾಲಯ ಸದಸ್ಯತ್ವ, ಗ್ರಂಥಾಲಯ ಬಳಕೆ, ಸಗಟು ಖರೀದಿ, ಪುಸ್ತಕ ಆಯ್ಕೆ.

Waterstone ಸರಣಿ ಪುಸ್ತಕ ಮಳಿಗೆಗಳ ವ್ಯವಸ್ಥಾಪಕ ನಿರ್ದೇಶಕ Tim Coates ಕಳೆದ ಏಪ್ರಿಲ್‌ನಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಕ್ರಿ.ಶ. ೨೦೨೦ ರ ಹೊತ್ತಿಗೆ ಬ್ರಿಟನ್ನಿನ ಸಾರ್ವಜನಿಕ ಗ್ರಂಥಾಲಯಗಳು ಅನಪೇಕ್ಷಿತ/ ಅನುಪಯುಕ್ತ ಆಗಲಿವೆ ಎಂದು Libri ಸಂಸ್ಥೆಗೆ ತಿಳಿಸಿದ್ದಾರೆ. ಕಳೆದ ದಶಕದಲ್ಲಿ ಈ ಗ್ರಂಥಾಲಯಗಳ ವಾರ್ಷಿಕ ವೆಚ್ಚ ಪ್ರತಿ ವರ್ಷ ಗಣನೀಯವಾಗಿ ಹೆಚ್ಚುತ್ತಿದ್ದರೂ (ಕಳೆದ ೫ ವರ್ಷಗಳಲ್ಲಿ ಇದು ಶೇ ೨೫ ರಷ್ಟು ಹೆಚ್ಚಿದೆ) ಓದುಗರ ಭೇಟಿ ಶೇ ೨೧ ರಷ್ಟು ಮತ್ತು ಪುಸ್ತಕ ಎರವಲು ಶೇ ೩೫ ರಷ್ಟು ಇಳಿಮುಖವಾಗಿರುವುದನ್ನು ಗಮನದಲ್ಲಿಟ್ಟು ಈ ತೀರ್ಮಾನಕ್ಕೆ ಬಂದಿದ್ದಾರೆ (ಕಳೆದ ೨೦ ವರ್ಷಗಳಲ್ಲಿ ಪುಸ್ತಕ ಎರವಲು ಪಡೆಯುವುದು ಶೇ ೫೦ ರಷ್ಟು ಇಳಿಮುಖವಾಗಿದೆ). ಪಶ್ಚಿಮ ದೇಶಗಳಲ್ಲಿ ಪ್ರಕಟಿತ ಪುಸ್ತಕಗಳ ಶೇ ೭೮ ರಿಂದ ೯೫ ರಷ್ಟನ್ನು ಸಾರ್ವಜನಿಕರು ಕೊಂಡು ಓದುವುದರಿಂದ ಗ್ರಂಥಾಲಯಗಳನ್ನು ಅವರು ಅಷ್ಟಾಗಿ ಅವಲಂಬಿಸಬೇಕಿಲ್ಲ ಆದರೆ ನಮ್ಮಲ್ಲಿ ಪ್ರಕಟಿತ ಪುಸ್ತಕಗಳ ಶೇ ೨೫ ರಷ್ಟನ್ನು ಮಾತ್ರ ವ್ಯಕ್ತಿಗಳು ಕೊಳ್ಳುತ್ತಾರೆ, ಮಿಕ್ಕವುಗಳನ್ನು ಸಾರ್ವಜನಿಕ ಗ್ರಂಥಾಲಯಗಳಂತಹ ಸಂಸ್ಥೆಗಳೇ ಕೊಳ್ಳಬೇಕಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಮೇಲಾಗಿ ಒಂದು ಶತಮಾನದ ಹಿಂದೆ ಅಂದರೆ ೧೯೦೫ ರಲ್ಲಿ ಒಂದು ಸಾಧಾರಣ ಬೆಲೆಯ ಪುಸ್ತಕವನ್ನು ಕೊಳ್ಳಲು ಮುಂದುವರಿದ ದೇಶಗಳಲ್ಲಿ ಒಬ್ಬ ವ್ಯಕ್ತಿಯ ೪ ಘಂಟೆಯ ದುಡಿಮೆಯ ಹಣ ಬೇಕಿತ್ತು. ಇಂದು ೨೦೦೫ ರಲ್ಲಿ ಅಂತಹ ಪುಸ್ತಕವನ್ನು ಕೇವಲ ೨೦ ನಿಮಿಷದ ದುಡಿಮೆಯಿಂದ ಕೊಳ್ಳಲು ಸಾಧ್ಯ. ಗ್ರಂಥಾಲಯ ಮತ್ತು ಓದುವ ಹವ್ಯಾಸದ ವಿರುದ್ಧ ಟಿ ವಿ, ಇಂಟರ್‌ನೆಟ್ ಮತ್ತಿತರ ಡಿಜಿಟಲ್ ಮಾಧ್ಯಮಗಳ ದಾಳಿ ಎಲ್ಲೆಡೆ ಇದೆ. ಪರಂಪರಾನುಗತವಾಗಿ ಓದುಗರು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪಡೆಯುತ್ತಿದ್ದ ಹಲವಾರು ಮಾಹಿತಿ ಸೇವೆಗಳನ್ನು ಗೂಗಲ್ ಮತ್ತು ಅಮೆಜಾನ್‌ಗಳ ಮೂಲಕ ಅಂತರ್ಜಾಲದಿಂದ ಪಡೆಯುತ್ತಿದ್ದಾರೆ. ಕೆಲವು ಹೊಸ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಹೆಚ್ಚಿದ ಬಳಕೆಯು ಅಂತರ್ಜಾಲ, ಸಂಗೀತದ ಸಿಡಿಗಳು ಮತ್ತು ಸ್ನೇಹಿತರೊಟ್ಟಿಗೆ ಚಾಟ್ ಮಾಡುವುದರಿಂದ ಆಗುತ್ತಿದೆ. ಇವೆಲ್ಲವನ್ನು ಗಮನಿಸಿದಾಗ ಪಶ್ಚಿಮ

(ಮುಂದುವರೆದ) ರಾಷ್ಟ್ರಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಮುಚ್ಚುವುದು ಆತಂಕಕಾರಿ ಬೆಳವಣಿಗೆಯಲ್ಲ. ಬದಲಿಗೆ ಅದು ಸ್ವಲ್ಪ ಮಟ್ಟಿಗೆ ಅಪೇಕ್ಷಣೀಯವೂ ಆಗಬಹುದು. ಕ್ರಿ.ಶ.೧೮೫೦ ರಿಂದ ಸಾರ್ವಜನಿಕ ಗ್ರಂಥಾಲಯಗಳ ಚಳುವಳಿಯ ಅಂಗವಾಗಿ ಆರಂಭಗೊಂಡು ೨೦ ನೇ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ ಈ ಗ್ರಂಥಾಲಯಗಳು ಅತ್ಯುನ್ನತ ಸೇವೆ ಸೌಕರ್ಯಗಳನ್ನು ದೊರಕಿಸಿಕೊಟ್ಟು ಸಮಾಜದ ಅವಿಭಾಜ್ಯ ಅಂಗವಾಗಿ ಸಾರ್ಥಕತೆ ಪಡೆದವೆಂಬುದು ಸ್ಮರಣೀಯ.

ಇಂತಹ ಹಿನ್ನಡೆಗೆ ಕಾರಣ ಓದುಗರ ಮೂಲಭೂತ ಅವಶ್ಯಕತೆಗಳನ್ನು ನಿರ್ಲಕ್ಷಿಸಿರುವುದು ಎಂಬುದನ್ನು ಮನಗಂಡು ಇದರ ಹೊಣೆಯನ್ನು ಗ್ರಂಥಾಧಿಕಾರಿಗಳು ಮತ್ತು ಸ್ಥಳೀಯ ನಗರಸಭಾ ಸದಸ್ಯರು ಸರಿಸಮನಾಗಿ ಹೊರಬೇಕು ಎಂದು ವರದಿ ತಿಳಿಸುತ್ತದೆ. ಅಲ್ಲದೆ ಸಾರ್ವಜನಿಕ ಗ್ರಂಥಾಲಯಗಳ ಹಿನ್ನಡೆಯನ್ನು ಸಮರ್ಪಕವಾಗಿ ತಡೆದು ಗ್ರಂಥಾಲಯಗಳನ್ನು ಉಳಿಸಲು Coates ಹಲವು ತುರ್ತು ಪರಿಹಾರಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸದಾ ಸ್ವಾಗತಿಸುವ ಆಕರ್ಷಣೀಯ ಗ್ರಂಥಾಲಯ ಕಟ್ಟಡ, ಗ್ರಂಥಾಲಯ ತೆರೆದಿರುವ ವೇಳೆಯನ್ನು ಶೇ ೫೦ ರಷ್ಟು ಹೆಚ್ಚಿಸುವುದು, ಪರಾಮರ್ಶನ ಮತ್ತು ಇತರ ಗ್ರಂಥ ಸಂಗ್ರಹವನ್ನು ಬಲಪಡಿಸುವುದು ಮತ್ತು ಮಾಹಿತಿ ತಂತ್ರಜ್ಞಾನದ ಸೌಲಭ್ಯಗಳನ್ನು ಬಲಪಡಿಸುವುದು ಸೇರಿವೆ. ಸುಮಾರು ೫೦೦೦ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪುಸ್ತಕ ಕೊಳ್ಳುವ ವೆಚ್ಚವನ್ನು ಮೂರು ಪಟ್ಟು ಹೆಚ್ಚಿಸಬೇಕೆಂದು Libri ಸಂಸ್ಥೆ ಪ್ರತಿಪಾದಿಸಿದೆ. ಈ ವರದಿ ತಯಾರಿಸುವಲ್ಲಿ ನೆರವಾದ Hampshire ಗ್ರಂಥಾಲಯ ಸಮೂಹದ ಆಡಳಿತ ಮಂಡಳಿ ಮೇಲಿನ ತುರ್ತು ಪರಿಹಾರಗಳ ಜೊತೆಗೆ 'ಡಿಸ್ಕವರಿ ಕೇಂದ್ರ' ಗಳೆಂಬ ಹೊಸ ಆಕರ್ಷಕ ಸೇವೆಯೊಂದನ್ನು ತನ್ನ ಹತ್ತು ಗ್ರಂಥಾಲಯಗಳಲ್ಲಿ ಆರಂಭಿಸಿ ಅದರಲ್ಲಿ ಗ್ರಂಥಾಲಯ ಸೇವೆಯೊಟ್ಟಿಗೆ ಪತ್ರಾಗಾರ (ಆರ್ಕೈವ್), ವಸ್ತು ಸಂಗ್ರಹಾಲಯ (ಮ್ಯೂಸಿಯಂ), ನಿರಂತರ ಕಲಿಕೆ ಮತ್ತು ಇತರ ಸಾಂಸ್ಕೃತಿಕ ಸೇವೆಗಳನ್ನು ಬೆಸೆದು ಪ್ರಯೋಗ ನಡೆಸಿದೆ. ಬ್ರಿಟನ್ನಿನ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನಿಗಳ ಸಂಸ್ಥೆಗಳು Coates ಅವರು ಗ್ರಂಥಾಲಯಗಳನ್ನು ಪುಸ್ತಕದ ಅಂಗಡಿಗಳಂತೆ ಪರಿಗಣಿಸಿ ಈ ವರದಿ ತಯಾರಿಸಿದ್ದಾರೆ ಎಂದು ಆರೋಪಿಸಿ, ಅವರ ವಾದವನ್ನು ಪೂರ್ಣವಾಗಿ ಒಪ್ಪದಿದ್ದರೂ ಸಾರ್ವಜನಿಕ ಗ್ರಂಥಾಲಯಗಳ ಜನಪ್ರಿಯತೆ ಕ್ಷೀಣಿಸುತ್ತಿರುವುದು ಮತ್ತು ಅವು ಎದುರಿಸುತ್ತಿರುವ ಸವಾಲುಗಳನ್ನು ಅಲ್ಲಗಳೆಯುವುದಿಲ್ಲ. ಉದಾಹರಣೆಗೆ ಪುಸ್ತಕದ ಅಂಗಡಿಗಳು ಲಾಭ ಹೆಚ್ಚಿಸಲು ಹೆಚ್ಚು ವೇಳೆ ತೆರೆದಿರುತ್ತವೆ, ಆದರೆ ಸಾರ್ವಜನಿಕ ಗ್ರಂಥಾಲಯಗಳಿಗೆ ಅದೇ ಸೂತ್ರ ಅನುಸರಿಸಿದರೆ ಗ್ರಂಥಾಲಯದ ಉಪಯೋಗ ಸ್ವಲ್ಪಮಟ್ಟಿಗೆ ಹೆಚ್ಚಬಹುದಾದರೂ ಆಡಳಿತ ವೆಚ್ಚ ಅಗಾಧವಾಗುತ್ತದೆ (ಅಂದರೆ ಸಾರ್ವಜನಿಕ ಗ್ರಂಥಾಲಯಗಳ ಉಪಯೋಗ ಅವುಗಳನ್ನು ಹೆಚ್ಚು ಕಾಲ ತೆರೆದಿಡಲು ವ್ಯಯಿಸುವ ವೆಚ್ಚಕ್ಕೆ ಅನುಗುಣವಾಗಿರುವುದಿಲ್ಲ) ಎಂಬುದು ಅವರ ವಾದ. ಈ ವರದಿಯಿಂದ ನಿಬ್ಬೆರಗಾದ ಬ್ರಿಟೀಷರು ಇದನ್ನು ಸಾಕಷ್ಟು ಚರ್ಚೆಗೆ ಮತ್ತು ವಿವಾದಕ್ಕೆ ಒಳಪಡಿಸಿದ್ದಲ್ಲದೆ ಕೂಡಲೇ ಹಲವಾರು ಕ್ರಮಗಳನ್ನೂ ಕೈಗೊಂಡಿದ್ದಾರೆ. ಓದುವ ಹವ್ಯಾಸ ಇಲ್ಲದವರ ಮತ್ತು ಗ್ರಂಥಾಲಯ ಸದಸ್ಯರಲ್ಲದವರನ್ನು (ಬಳಸದೆ ಇರುವವರನ್ನು) ದೃಷ್ಟಿಯಲ್ಲಿರಿಸಿ ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಆದರೆ ಅಂತಹ ಸಮುದಾಯದ ಅವಶ್ಯಕತೆ ಮತ್ತು ಅಧ್ಯಯನದ ಫಲಿತಾಂಶಗಳನ್ನು, ಹಾಗೂ ಮಂಡಿಸಿರುವ ಕೋರಿಕೆಗಳನ್ನು ಮನ್ನಿಸಿದರೆ ಸಾರ್ವಜನಿಕ ಗ್ರಂಥಾಲಯಗಳು ತಮ್ಮ ಪುಸ್ತಕದ ಕಪಾಟುಗಳನ್ನು ಸಿಡಿ ಕೇಳುವ ಧ್ವನಿ ಸೌಲಭ್ಯವಿರುವ ಮೇಜುಗಳಾಗಿ, ಕ್ಲಾಸಿಕ್ ಪುಸ್ತಕಗಳನ್ನು ಕಾಮಿಕ್ ಪುಸ್ತಕಗಳಾಗಿ ಬದಲಾಯಿಸುವುದಲ್ಲದೆ, ಇಂಟರ್‌ನೆಟ್ ಚ್ಯಾಟಿಂಗ್ ವ್ಯವಸ್ಥೆಯನ್ನು ಹೆಚ್ಚಿಸಬೇಕಾದೀತು ಎಂಬ ಭಯವನ್ನೂ ಹುಟ್ಟಿಸಿದೆ.

ಮುಖ್ಯವಾಗಿ ನಮ್ಮ ಸಮಾಜದಲ್ಲಿ ಇಂತಹದೊಂದು ಅಧ್ಯಯನ, ವರದಿ, ಆರೋಗ್ಯಕರ ಚರ್ಚೆ, ವಿವಾದ ಸಾಧ್ಯವೆ? ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಯುನೆಸ್ಕೋ ಏರ್ಪಡಿಸಿದ್ದ ಚರ್ಚಾರೂಪದ ಇ–ಪುಸ್ತಕ ಕಾರ್ಯಗಾರದಲ್ಲಿ ಹೊಸ ಮಧ್ಯವರ್ತಿಗಳಾದ aggregators ಬಗ್ಗೆ ಮಾತನಾಡುತ್ತಿದ್ದ ಸ್ನೇಹಿತರೊಬ್ಬರು "aggregators ಸಾರ್ವಜನಿಕ ಗ್ರಂಥಾಲಯಗಳನ್ನು ಅನುಪಯುಕ್ತ/ಅರ್ಥಹೀನ ಮಾಡುವ ದಿಕ್ಕಿನಲ್ಲಿವೆ" ಎಂದು ಹೇಳಿದರು. ಈ ವಿಷಯದ ಮೇಲೆ ಹೆಚ್ಚಿನ ಚರ್ಚೆ ಆ ಕಾರ್ಯಕ್ರಮದಲ್ಲಿ ಸಾಧ್ಯವಾಗಲಿಲ್ಲ. (ಹಲವಾರು ಪ್ರಕಾಶಕರ ಇ–ಗ್ರಂಥಗಳನ್ನು ಮತ್ತು ಇ–ನಿಯತಕಾಲಿಕೆಗಳನ್ನು ಸಂಗ್ರಹಿಸಿ ಅವುಗಳನ್ನು (ಓದುಗರಿಗೆ) ನೇರವಾಗಿ ಅಂತರ್ಜಾಲದ ಮೂಲಕ ದೊರಕಿಸಿಕೊಡುವ ಇ–ಗ್ರಂಥಾಲಯ ಸೇವೆಯಲ್ಲಿ ಇತ್ತೀಚೆಗೆ ತೊಡಗಿರುವ ಮಧ್ಯವರ್ತಿಗಳೇ aggregators)

ಈ ಹಿನ್ನೆಲೆಯಲ್ಲಿ ನಮ್ಮ ಸಾರ್ವಜನಿಕ ಗ್ರಂಥಾಲಯಗಳು ಕ್ರಮಬದ್ಧವಾದ ಅಂಕಿ ಅಂಶಗಳನ್ನು ಸಂಗ್ರಹಿಸದೆ, ಸರಿಯಾದ ಅಧ್ಯಯನಗಳಿಗೂ ಒಳಪಡದೆ ಕ್ರಿ ಶ ೨೦೨೦ ರಷ್ಟರಲ್ಲಿ ಇಲ್ಲವಾಗುವುವೋ, ಪುನಶ್ಚೇತನ ಪಡೆಯುವವೋ ಅಥವ ಯಥಾಸ್ಥಿತಿ ಸತ್ತಂತೆ ಬದುಕಿರುವವೋ ಕಾದು ನೋಡಬೇಕಿದೆ. ಸಾರ್ವಜನಿಕ ಗ್ರಂಥಾಲಯ ಚಳುವಳಿ ನಮ್ಮಲ್ಲಿ ಸುಮಾರು ೧೧೦ ವರ್ಷಗಳಷ್ಟು ತಡವಾಗಿ ಆರಂಭವಾಗಿದೆ. ಆರಂಭದ ದಶಕಗಳಲ್ಲಿ ಇದ್ದ ಉತ್ಸಾಹ ಇಂದು ಉಳಿದಂತೆ ತೋರದು. ಸಂಗ್ರಹಿಸಿದ ಕೋಟ್ಯಾಂತರ ರೂಪಾಯಿ "ಗ್ರಂಥಾಲಯ–ಕರವನ್ನು" ಸಕಾಲದಲ್ಲಿ ಗ್ರಂಥಾಲಯಗಳಿಗೆ ಬಳಸಲು ಅನುವು ಮಾಡಿಕೊಡದ ನಗರಪಾಲಿಕೆ ಮತ್ತು ನಗರಸಭೆಗಳು ಒಂದೆಡೆಯಾದರೆ, ದೊರಕಿದ ಸೌಕರ್ಯ ಮತ್ತು ಸಂಪತ್ತಿನಿಂದಲೇ ಕ್ರಮಬದ್ಧ ಗ್ರಂಥಾಲಯ ಸೇವೆ ರೂಢಿಸಲಾಗದೆ ಆಗೊಮ್ಮೆ

ಈಗೊಮ್ಮೆ ಗಣಕೀಕೃತ ದಾಸ್ತಾನು ಪರಿಶೋಧನೆ, ಪೀಣ್ಯದಲ್ಲೊಂದು ಸಾರ್ವಜನಿಕ ತಾಂತ್ರಿಕ ಗ್ರಂಥಾಲಯ ಶಾಖೆ, ಆರ್ ಪಿ ಸಿ ಲೇಔಟಿನಲ್ಲೊಂದು ಹೈಟೆಕ್/ಸಿಂಗಾಪುರ ಗ್ರಂಥಾಲಯ ಶಾಖೆ, ಬಸವನಗುಡಿಯಲ್ಲೊಂದು ಸೈಬರ್ ಗ್ರಂಥಾಲಯ ಶಾಖೆ, ಗ್ರಂಥಾಲಯ ಗಣಕೀಕರಣ, ಇತ್ಯಾದಿ ಪ್ರಚಾರದಲ್ಲೇ ತೃಪ್ತಿ ಪಟ್ಟುಕೊಳ್ಳುವ ಗ್ರಂಥಾಲಯ ಆಡಳಿತ ವರ್ಗ ಮತ್ತೊಂದು ಕಡೆ ಹಾಗೂ ಗ್ರಂಥಾಲಯ ಖರೀದಿಸಿದ ಪುಸ್ತಕಗಳು ಎಷ್ಟರಮಟ್ಟಿಗೆ ಬಳಕೆಯಾಗುತ್ತಿವೆ ಎನ್ನುವುದನ್ನು ಗಮನಿಸದೆ ಕೇಂದ್ರೀಕೃತ ಸಗಟು ಖರೀದಿಯೇ ಸರ್ವಸ್ವವೆಂದು ನಂಬಿರುವ ಬರಹಗಾರರು, ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು ಮತ್ತವರ ಒಕ್ಕೂಟಗಳು ಮಗದೊಂದೆಡೆಯಿದ್ದು ಸಾರ್ವಜನಿಕ ಗ್ರಂಥಾಲಯಗಳ ಸೇವೆ ಸಂಪೂರ್ಣ ನೇಪಥ್ಯಕ್ಕೆ ಸರಿದು ಕೇಂದ್ರೀಕೃತ ಸಗಟು ಖರೀದಿಯೆಂಬ ಸರ್ಕಾರಿ ಸಬ್ಸಿಡಿ ವ್ಯವಸ್ಥೆಯೇ ಸಾರ್ವಜನಿಕ ಗ್ರಂಥಾಲಯಗಳ ಮುಖ್ಯ ಕೆಲಸ/ ಉದ್ದೇಶ ಆದರೆ ಆಶ್ಚರ್ಯವಿಲ್ಲ.

ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳು ಜನಸಂಖ್ಯೆಯ ಶೇ. ೧.೩ ರಷ್ಟು ಸದಸ್ಯತ್ವವನ್ನು ಹೊಂದಿವೆ. ಸದಸ್ಯತ್ವ ಅಮೇರಿಕ ಮತ್ತು ಬ್ರಿಟನ್‌ನಲ್ಲಿ ಕ್ರಮವಾಗಿ ಜನಸಂಖ್ಯೆಯ ಶೇ.೭೧ ಮತ್ತು ೫೩ ಇದೆ. ಇಲಾಖೆ ಕಳೆದ ೪೦ ವರ್ಷಗಳಲ್ಲಿ ೩೦,೦೦೦ ಗ್ರಾಮಗಳ ಪೈಕಿ ಕೇವಲ ೩,೦೦೦ ಗ್ರಾಮಗಳಿಗೆ ನಾಮಕಾವಸ್ತೆ ಗ್ರಾಮೀಣ ಗ್ರಂಥಾಲಯಗಳ ಶಾಖೆ ಆರಂಭಿಸುವಲ್ಲಿ ಯಶಸ್ವಿಯಾಗಿರುತ್ತದೆ. ರಾಜಧಾನಿಯಲ್ಲೆ ೮೩ ಸಾರ್ವಜನಿಕ ಗ್ರಂಥಾಲಯಗಳಿದ್ದು ಸದಸ್ಯತ್ವ ಕೇವಲ ೬೬೦೦೦ ಇದೆ. ಅಕ್ಷರಸ್ಥರಲ್ಲಿ ಶೇ. ೧೫ ರಷ್ಟು ಮಂದಿ ಮಾತ್ರ ಈ ಸಾರ್ವಜನಿಕ ಗ್ರಂಥಾಲಯಗಳಿಗೆ ಭೇಟಿ ಕೊಡುತ್ತಾರೆ. ಅವರಲ್ಲೂ ಶೇ. ೬೦ ರಷ್ಟು ಮಂದಿ ದಿನಪತ್ರಿಕೆ ಓದಲು ಹೋಗುತ್ತಾರೆ ಎಂದರೆ ಸಾರ್ವಜನಿಕ ಗ್ರಂಥಾಲಯಗಳ ಬಳಕೆ, ಅಭಿವೃದ್ಧಿ ಮತ್ತು ಭವಿಷ್ಯ ಎಂತಿದೆ ಎಂದು ಊಹಿಸಬಹುದು. ಸಾರ್ವಜನಿಕ ಗ್ರಂಥಾಲಯ ಕಾಯಿದೆ ಮತ್ತು ಗ್ರಂಥಗಳ ಹಕ್ಕು ಕಾಯಿದೆ ಅನುಷ್ಠಾನಕ್ಕೆ ಬಂದು ಮೂರೂವರೆ ದಶಕಗಳು ಕಳೆದರೂ ಕನ್ನಡ ಪುಸ್ತಕಗಳ ಸಮಗ್ರ ಸಂಗ್ರಹಣೆ ಮತ್ತು ಸಮಗ್ರ ಗ್ರಂಥಸೂಚಿಯನ್ನು ಕಾಣಲಾಗಿಲ್ಲ. ಇನ್ನು ಕಂಪ್ಯೂಟರೀಕರಣ, ಡಿಜಿಟಲ್/ ಸೈಬರ್/ ಸಿಂಗಾಪುರ ಗ್ರಂಥಾಲಯಗಳ ಬಣ್ಣನೆ ತೀರ ಪ್ರಚಾರಪ್ರಿಯತೆಯನ್ನು ತೋರಿಸುತ್ತದೆ. ಒಂದು ಸಾಮಾನ್ಯ ಗ್ರಂಥಾಲಯಕ್ಕೆ ಕೋಟಿಗಟ್ಟಲೆ ವಿದ್ಯುನ್ಮಾನ ಗ್ರಂಥಗಳನ್ನು ಕಂಪ್ಯೂಟರ್ ಮೂಲಕ ದೊರಕಿಸಿಕೊಡುವ ಅವಶ್ಯಕತೆ ಇದೆಯೆ? ಕೆಲವು ಸಾವಿರ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯ ಸಾಲದೆ? ಓದುಗನಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿಸುವುದೇ ಒಳ್ಳೆಯ ಗ್ರಂಥಾಲಯದ ಲಕ್ಷಣವಲ್ಲವೆ? ಅಸಂಬದ್ಧ ಮತ್ತು ಅಸಮರ್ಪಕ ಗ್ರಂಥ ಸಂಗ್ರಹಣೆ ಹೊಂದಿರುವ ಒಂದು ಕಳಪೆ ಸಾಂಪ್ರದಾಯಿಕ ಗ್ರಂಥಾಲಯವನ್ನು ಗಣಕೀಕರಣಗೊಳಿಸಿದರೆ ಅಥವ ಡಿಜಿಟಲ್ ಗ್ರಂಥಾಲಯವಾಗಿ ಪರಿವರ್ತಿಸಿದರೆ ಅದು ಉತ್ಕೃಷ್ಟ ಗ್ರಂಥಾಲಯವಾದೀತೆ? ಮುದ್ರಿತ ರೂಪದಲ್ಲಿ ಓದುಗರನ್ನು ಪಡೆಯದ ಪುಸ್ತಕಗಳು ವಿದ್ಯುನ್ಮಾನ ರೂಪದಲ್ಲಿ ಪಡೆಯುತ್ತವೆ ಎನ್ನುವುದು ಭ್ರಮೆಯಲ್ಲವೇ? ಹೊಸಹೊಸ ಸೇವೆ ಸೌಕರ್ಯಗಳಿಗೆ ವಿನೂತನ ತಂತ್ರಜ್ಞಾನ ಬಳಸಲೇಬೇಕೆಂಬ ನಿರ್ಬಂಧವಿದೆಯೆ? ಇತ್ಯಾದಿ ಪ್ರಶ್ನೆಗಳಿಗೆ ನಿಸ್ಪೃಹ ಉತ್ತರ ದೊರಕಿಸಿಕೊಡದೆ ಯಾರದೋ ಲಾಭಕ್ಕಾಗಿ ಅವರ ತಾಳಕ್ಕೆ ತಕ್ಕಂತೆ ಕುಣಿದು ಪ್ರಚಾರಕ್ಕಾಗಿ ಯೋಜನೆಗಳನ್ನು ಪ್ರಕಟಿಸುವುದು ಇಂದಿನ ನಮ್ಮ ಪರಿಸ್ಥಿತಿಗೆ ಸರಿಹೊಂದುವುದಿಲ್ಲ.

ಹಲವಾರು ವರ್ಷಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅನುಸರಿಸುವ ಪುಸ್ತಕಗಳ ಆಯ್ಕೆ ಮತ್ತು ಸಗಟು ಖರೀದಿ ನೀತಿಯ ಬಗ್ಗೆ ಗಂಭೀರ ಆರೋಪಗಳಿವೆ. ವಿಚಿತ್ರವೆಂದರೆ ಸಾರ್ವಜನಿಕ ಗ್ರಂಥಾಲಯಗಳ ಇತರ ಕಾರ್ಯ, ಕರ್ತವ್ಯ ಮತ್ತು ಸೇವೆಗಳ ಬಗ್ಗೆಯಾಗಲಿ, ಖರೀದಿಸಿದ ಪುಸ್ತಕಗಳ ಉಪಯೋಗದ ಬಗ್ಗೆಯಾಗಲಿ ಅಷ್ಟು ಚರ್ಚೆ ಆದಂತಿಲ್ಲ. ಲೇಖಕರು (ಮುಖ್ಯವಾಗಿ ಸಾಹಿತಿಗಳು), ಪ್ರಕಾಶಕರು, ಪುಸ್ತಕಗಳ ವಿತರಕರು ಮತ್ತು ಮಾರಾಟಗಾರರು ಇಲಾಖೆಯ ಆಯ್ಕೆ, ಆಯ್ಕೆ ಸಮಿತಿ ಮತ್ತು ಗ್ರಂಥಾಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಸಾಕಷ್ಟು ದೂರಿದ್ದಾರೆ. ಇವೆಲ್ಲವನ್ನೂ ಗಮನಿಸಿದರೆ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಆಯ್ಕೆ ಮಾಡುವ ಅಧಿಕಾರಕ್ಕಾಗಿ ಬಿರುಸಿನ ಪೈಪೋಟಿ ನಡೆಯುತ್ತಿರುವಂತೆ ತೋರುತ್ತದೆ. ಜನಸಂಖ್ಯೆಯ ಶೇ ೭೧ ರಷ್ಟು ಸದಸ್ಯರಿರುವ ಅಮೇರಿಕಾದ ಸಾರ್ವಜನಿಕ ಗ್ರಂಥಾಲಯಗಳಿಂದ ಪ್ರತಿ ಸದಸ್ಯ ವರ್ಷಕ್ಕೆ ಸರಾಸರಿ ೨ ಪುಸ್ತಕಗಳನ್ನು ಎರವಲು ಪಡೆಯುವುದು ಪುಸ್ತಕೋದ್ಯಮದ ಶೇ ೯೫ ರ ಮಾರಾಟಕ್ಕೆ ಸಮನಾಗಿರುತ್ತದೆ. ಆದರೆ ನಮ್ಮ ದೇಶದಲ್ಲಿ ಸಂಸ್ಥೆಗಳು ಖರೀದಿಸುವ ಪಾಲು ಶೇ. ೭೫ ರಷ್ಟಿದ್ದರೂ ಅವುಗಳ ಬಳಕೆ ತೀರ ಕಡಿಮೆ. ಪುಸ್ತಕಗಳ ಆಯ್ಕೆ ಮತ್ತು ಸಗಟು ಖರೀದಿ ಪ್ರಕ್ರಿಯೆ ಬಗ್ಗೆ ಹೆಚ್ಚು ಗದ್ದಲವೆಬ್ಬಿಸಿರುವ ಪ್ರಕಾಶಕರು, ವಿತರಕರು ಮತ್ತು ಪುಸ್ತಕ ವ್ಯಾಪಾರಿಗಳು ಆಯ್ಕೆಯಲ್ಲಿ ನೇರವಾಗಿ ಭಾಗವಹಿಸುವುದು, ಸಾಹಿತಿಗಳನೇಕರು ಸ್ವತಃ ಪ್ರಕಾಶಕರು ಮತ್ತು ಮಾರಾಟಗಾರರಾಗಿಯೂ ಇದ್ದು ಆಯ್ಕೆಯ ಸಮಿತಿಯ ಮೇಲೆ ಪ್ರಭಾವ ಬೀರುವುದು, ಮತ್ತು ಸಾಹಿತ್ಯೇತರ ಲೇಖಕರ ಪ್ರಾತಿನಿಧ್ಯತೆ ಇಲ್ಲದಿರುವುದು ಆಕ್ಷೇಪಣೀಯ.

ಗ್ರಂಥಾಧಿಕಾರಿ ಮತ್ತು ಗ್ರಂಥಾಲಯ ಸಿಬ್ಬಂದಿ ಮಾಡಬಹುದಾದ ಪುಸ್ತಕಗಳ ಆಯ್ಕೆಯ ಬಗ್ಗೆ ಅಷ್ಟು ವಿಶ್ವಾಸವಿಲ್ಲ ಎಂಬುದು ಸ್ಪಷ್ಟ ಎನಿಸಿರುವುದರಿಂದ ಅವರು ಇತರ ವರ್ಗದವರಿಗೆ ಮತ್ತು ಸಮಿತಿಗೆ ಪುಸ್ತಕ ಆಯ್ಕೆಗೆ ಬೇಕಾಗುವ ಮಾಹಿತಿ ಮತ್ತು ಆಧಾರಗಳನ್ನು ಒದಗಿಸಿ ಕೊಡುವುದರಲ್ಲಿ ಹೆಚ್ಚು ಪ್ರವೃತ್ತರಾಗಬೇಕು. ಸಂಬಂಧಪಟ್ಟವರ ನಂಬಿಕೆ ವಿಶ್ವಾಸ ಗಳಿಸುವಂತೆ ಗ್ರಂಥಾಲಯ ಸೇವೆಯನ್ನು ಅಭಿವೃದ್ಧಿಗೊಳಿಸುವುದು ಗ್ರಂಥಪಾಲಕರ ವೃತ್ತಿ ದೃಷ್ಟಿಯಿಂದ ಬಹಳ ಅವಶ್ಯಕ. ಕಾಲಕಾಲಕ್ಕೆ ಸರ್ವೇಕ್ಷಣೆಗಳನ್ನು ನಡೆಸಿ ಓದುಗರ ಅಭಿರುಚಿಯನ್ನ ಗುರುತಿಸುವುದು, ಓದುಗರ ಸಲಹೆಗಳನ್ನು ಆಹ್ವಾನಿಸಿ ಸಂಗ್ರಹಿಸುವುದು, ಎರವಲು ಸೇವೆಯಲ್ಲಿ ಈಗಾಗಲೆ

ಉಪಯೋಗಿಸಿದ ಪುಸ್ತಕಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ ಪರಿಷ್ಕರಿಸುವುದು, ಪ್ರಶಸ್ತಿ–ಪುರಸ್ಕಾರ ಪಡೆದ ಮತ್ತು ದಾಖಲೆ ಸ್ಥಾಪಿಸಿದ ಕೃತಿಗಳನ್ನು ಪಟ್ಟಿ ಮಾಡುವುದು, ಪರಾಮರ್ಶನ ಸೇವೆಯ ಬೇಡಿಕೆಗೆ ಬೇಕಾಗುವ ಸಂದರ್ಭ ಗ್ರಂಥಗಳನ್ನು ಗುರುತಿಸುವುದು, ಇತ್ಯಾದಿ ಕಾರ್ಯಗಳ ಮೂಲಕ ಗ್ರಂಥಪಾಲಕರು ಪುಸ್ತಕಗಳ ಆಯ್ಕೆಯಲ್ಲಿ ನೆರವಾಗಬಹುದಾದ ಸಾಧ್ಯತೆಗಳಿವೆ ಮತ್ತು ಅದು ಅವರ ಕರ್ತವ್ಯ ಕೂಡ. ಅಲ್ಲದೆ ಪುಸ್ತಕಗಳ ಆಯ್ಕೆಯನ್ನು ಸುಗಮಗೊಳಿಸಲು ಹಲವು ಪೂರ್ವ ಸಿದ್ದತೆಗಳಾದ, ಗ್ರಂಥಾಲಯಗಳಲ್ಲಿ ಈಗಾಗಲೆ ಇರುವ ಪುಸ್ತಕ ಸಂಗ್ರಹಣೆಯ ರೂಪುರೇಷೆ, ಭಾಷೆ ಮತ್ತು ವಿಷಯಗಳ ಪ್ರಾತಿನಿಧ್ಯತೆ, ಬೆಲೆಗಳ ಪರಿಶೀಲನೆ, ಬೇಕಾಗಬಹುದಾದ ಪ್ರತಿಗಳ ನಿರ್ಧಾರ, ಪುಸ್ತಕ ಪರಿಶೀಲನೆಗೆ ವ್ಯಾಪಕ ವ್ಯವಸ್ಥೆ, ಇತ್ಯಾದಿ ಹಿನ್ನೆಲೆ ಕಾರ್ಯಗಳು ನೇರ ಪುಸ್ತಕ ಆಯ್ಕೆಯಲ್ಲಿ ಭಾಗವಹಿಸುವುದಕ್ಕಿಂತ ಮುಖ್ಯವಾದವುಗಳು ಹಾಗು ಗ್ರಂಥಪಾಲಕರು ನಿರ್ವಹಿಸಲೇ ಬೇಕಾದವುಗಳು. ಓದುಗರಿಗೆ ಪುಸ್ತಕಗಳ ಪಟ್ಟಿ (catalogue), ಸಮೀಕ್ಷೆಗಳು (reviews), ಗ್ರಂಥಪ್ರಶಂಸೆ (blurb), ಇತ್ಯಾದಿಗಳನ್ನು ಸಂಗ್ರಹಿಸಿ ಹೊಸ ಪುಸ್ತಕಗಳ ಬಗ್ಗೆ ಮಾಹಿತಿ ನೀಡಿ, ಪುಸ್ತಕಗಳ ಪರಿಶೀಲನೆಗೆ ಮುಕ್ತ ಅವಕಾಶ (ಪುಸ್ತಕ ಪ್ರದರ್ಶನ, ಮೇಳ, ಇತ್ಯಾದಿ) ಕಲ್ಪಿಸಿ, ಅವರಿಂದ ಸಲಹೆಗಳನ್ನು ಆಹ್ವಾನಿಸಿ, ಅಂತಹ ಓದುಗರ ಸಲಹೆ ಮತ್ತು ಬೇಡಿಕೆಗಳಿಗೆ ಅತ್ಯಂತ ಹೆಚ್ಚು ಆದ್ಯತೆ ನೀಡಬೇಕು. ವಾಸ್ತವದಲ್ಲಿ ಓದುಗರ ಸಲಹೆಗಳು ವಿರಳ, ಅವರು ತಮ್ಮ ಹಕ್ಕನ್ನು ಚಲಾಯಿಸುವುದಿಲ್ಲ, ಹೆಚ್ಚಿನ ಓದುಗರು ಪುಸ್ತಕ ಆಯ್ಕೆ ತಮ್ಮ ಜವಾಬ್ದಾರಿಯಲ್ಲವೆಂದು ಭಾವಿಸಿ ಅನಾಸಕ್ತರಾಗಿರುತ್ತಾರೆಂಬ ಕಾರಣದಿಂದ ಗ್ರಂಥ ಸಂಗ್ರಹಣ ಕಾರ್ಯದಲ್ಲಿ ಅತೀ ಮುಖ್ಯವಾದ ಈ ಆಯ್ಕೆಯ ಮಾರ್ಗವನ್ನು ಕಡೆಗಣಿಸಲಾಗಿದೆ. ಲೇಖಕರು ಮತ್ತು ಪ್ರಕಾಶಕರಿಂದ ಅರ್ಜಿಗಳನ್ನು ಆಹ್ವಾನಿಸಿ ಅದರೊಂದಿಗೆ ಶುಲ್ಕ ಮತ್ತು ಪುಕ್ಕಟೆ ಪ್ರತಿಗಳನ್ನು ತೆಗೆದುಕೊಂಡು, ಪುಸ್ತಕಗಳನ್ನು ಆಯ್ಕೆ ಮಾಡುವುದು ಗ್ರಂಥಾಲಯಗಳಿಗೆ ಶೋಭಿಸುವುದಿಲ್ಲ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕೇಂದ್ರೀಕೃತ ಸಗಟು ಖರೀದಿ ಪದ್ದತಿ ಬಗ್ಗೆಯೂ ಹೆಚ್ಚಿನ ಟೀಕೆ ಮತ್ತು ಆರೋಪಗಳಿವೆ. ಈ ವ್ಯವಸ್ಥೆಯಲ್ಲಿ ಓದುಗರಿಗೆ ಬೇಕಾದ ಪುಸ್ತಕಗಳನ್ನು ಬೇಕಾದ ಗ್ರಂಥಾಲಯಗಳಿಗೆ ಬೇಕೆನಿಸಿದಾಗ ಕೊಳ್ಳುವುದಕ್ಕೆ ಅವಕಾಶವಿಲ್ಲ. ಬದಲಾಗಿ ಇದು ಪ್ರಕಟಿತ ಕನ್ನಡ ಪುಸ್ತಕಗಳಿಗೆ ಒಂದು ಸಬ್ಸಿಡಿ ಮಾರ್ಗವಾಗಿ ಬೆಳೆದು ಬಂದಂತೆ ಮತ್ತು ಲೇಖಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ತಮ್ಮ ಪುಸ್ತಕಗಳಿಗೆ ಈ ಸಬ್ಸಿಡಿ ರೂಪದ ಸಗಟು ಖರೀದಿ ಆರ್ಡರ್ ಗಿಟ್ಟಿಸಲು ಹಾತೊರೆಯುತ್ತಿರುವಂತೆ ತೋರುತ್ತದೆ. ಒಂದೇ ಉನ್ನತ ಸಮಿತಿ ಆಯ್ಕೆ ಮಾಡುವುದರಿಂದ ಹಲವಾರು ಆಯ್ಕೆ ಸಮಿತಿ ಅಥವ ಗ್ರಂಥಾಲಯಗಳಿಗೆ ಅರ್ಜಿ ಸಲ್ಲಿಸುವುದು ತಪ್ಪುತ್ತದೆ. ಖರೀದಿ ವ್ಯವಸ್ಥೆಯನ್ನು ಕನಿಷ್ಠ ಜಿಲ್ಲಾ ಮಟ್ಟದಲ್ಲಾದರೂ ವಿಕೇಂದ್ರೀಕರಣಗೊಳಿಸಬೇಕು. ಜಿಲ್ಲಾ ಖರೀದಿ ಸಮಿತಿಗಳು ಸಭೆ ಸೇರದೆಯೂ ಆಯ್ಕೆ ನಡೆಸಬಹುದು. ವಾಸ್ತವವಾಗಿ ಪುಸ್ತಕಗಳ ಆಯ್ಕೆ ಅರ್ಜಿ ಇಲ್ಲದೆಯೂ ನಡೆಯಬೇಕು. ಅಲ್ಲದೆ, ಸ್ಥಳೀಯ ಸಾಧಾರಣ ಮಾರಾಟಗಾರರಿಂದಲೂ ಪುಸ್ತಕ ಕೊಳ್ಳುವಂತಿರಬೇಕು.

ಮುಖ್ಯವಾಗಿ ಪುಸ್ತಕಗಳ ಉಪಯೋಗ ಮತ್ತು ಬೇಡಿಕೆಗಳ ಅಂಕಿಅಂಶಗಳನ್ನು ಎಲ್ಲ ಸಾರ್ವಜನಿಕ ಗ್ರಂಥಾಲಯಗಳು ಸಂಗ್ರಹಿಸಿ ಸಮಿತಿ ಮತ್ತು ಓದುಗರ ಗಮನಕ್ಕೆ ತರುತ್ತಿರಬೇಕು. ಈ ನಿಟ್ಟಿನಲ್ಲಿ ತುಂಬಾ ಸ್ಥೂಲವಾದ ಅಂಕಿ ಅಂಶಗಳು ದಾರಿ ತಪ್ಪಿಸಲೂ ಬಹುದು. ಉದಾಹರಣೆಗೆ, ಈ ಹಿಂದೆ ದಿನಪತ್ರಿಕೆಯೊಂದರ ವರದಿಯಂತೆ ಬೆಂಗಳೂರಿನ ಕೇಂದ್ರ ವಲಯದ ವ್ಯಾಪ್ತಿಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳ ಸಾಧನೆಯ ಅಂಕಿಅಂಶಗಳು ಹೀಗಿದ್ದು ಮೇಲ್ನೋಟಕ್ಕೆ ಸಂತಸ ತರುವಂತಿವೆ. "ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ಇಲ್ಲಿಯ ಗ್ರಂಥಾಲಯಗಳು ಗಮನಾರ್ಹ ರೀತಿಯಲ್ಲಿ ಮುನ್ನಡೆ ಸಾಧಿಸಿವೆ " ಎನ್ನುವಾಗ ಯಾವ ರಾಜ್ಯದ ಗ್ರಂಥಾಲಯಗಳಿಗೆ ಹೋಲಿಸುತ್ತಿದ್ದೇವೆ, ಅಲ್ಲಿನ ಅಂಕಿಅಂಶಗಳೇನು ಎನ್ನುವುದನ್ನು ವಿಶದ ಪಡಿಸುವುದು ಸೂಕ್ತ. ಬೆಂಗಳೂರಿನ ಕೇಂದ್ರ ವಲಯದ ಸಾರ್ವಜನಿಕ ಗ್ರಂಥಾಲಯಗಳಿಗೆ ೧೫,೫೭೦ ಸದಸ್ಯರು ಮತ್ತು ಮೂರು ಲಕ್ಷಕ್ಕೂ ಹೆಚ್ಚು ಗ್ರಂಥಗಳಿದ್ದು, ಪ್ರತೀ ದಿನ ಸುಮಾರು ೩೧೦೦ ಓದುಗರು ಬೇಟಿ ನೀಡಿ, ೬೧೦ ಗ್ರಂಥಗಳನ್ನು ಎರವಲು ಪಡೆಯುತ್ತಾರೆ ಎಂದು ಹೇಳಲಾಗಿದೆ. ಕುತೂಹಲದ ಸಂಗತಿಯೆಂದರೆ ಗುಣಲಕ್ಷಣಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ತುಂಬ ಹೋಲುವ ನಗರದ ಕೇಂದ್ರದಲ್ಲಿಯೇ ಇರುವ ಬ್ರಿಟೀಷ್ ಗ್ರಂಥಾಲಯದ ಬೆಂಗಳೂರಿನ ಒಂದು ಪುಟ್ಟ ಶಾಖೆ ಬಹಳ ಕಿರಿದಾದ (ಆದರೆ ಸೊಗಸಾಗಿ ಅಳವಡಿಸಿದ) ಕಟ್ಟಡದಲ್ಲಿದ್ದು, ಕೇವಲ ೨೨,೦೦೦ ಗ್ರಂಥಗಳು ಮತ್ತು ಬೆರಳೆಣಿಕೆಯಷ್ಟು ಸಿಬ್ಬಂದಿ ಹೊಂದಿದ್ದರೂ, ವರ್ಷಕ್ಕೆ ರೂ. ೭೦೦ ಶುಲ್ಕ ವಿಧಿಸಿಯೂ ಸುಮಾರು ೭೫೦೦ ಸದಸ್ಯರನ್ನು ಪಡೆದುಕೊಂಡಿದ್ದು, ಈ ಗ್ರಂಥಾಲಯಕ್ಕೆ ದಿನವೂ ೬೦೦ ಸದಸ್ಯರು ಬೇಟಿ ನೀಡಿ ಸುಮಾರು ೧೦೦೦ ಗ್ರಂಥಗಳನ್ನು ಎರವಲು ಪಡೆಯುತ್ತಾರೆ. ಈ ಗ್ರಂಥಾಲಯದ ಅರ್ಧದಷ್ಟು ಗ್ರಂಥಗಳು ಯಾವಾಗಲೂ ಎರವಲು ರೂಪದಲ್ಲಿ ಗ್ರಂಥಾಲಯದ ಹೊರಗೆ ಸದಸ್ಯರ ಬಳಿ ಇರುತ್ತವೆ. ಭಾಷೆ, ಶುಲ್ಕ ಮತ್ತು ಪ್ರವೇಶ ನಿರ್ಬಂಧಗಳಿದ್ದೂ ಒಂದು ಪುಟ್ಟ ಬ್ರಿಟೀಷ್ ಗ್ರಂಥಾಲಯದ ಶಾಖೆಯಿಂದ ದಿನಕ್ಕೆ ೧೦೦೦ ಪುಸ್ತಕಗಳನ್ನು ಎರವಲು ಪಡೆದ ಬೆಂಗಳೂರಿಗರು ಪುಕ್ಕಟೆ ಲಭ್ಯವಿರುವ ಹಲವು ಬಾಷೆಗಳ ೩ ಲಕ್ಷಕ್ಕೂ ಹೆಚ್ಚು ಪುಸ್ತಕಗಳಿರುವ ೧೭ ಸಾರ್ವಜನಿಕ ಗ್ರಂಥಾಲಯಗಳಿಂದ (ಕೇಂದ್ರ ವಲಯದ ಮುಖ್ಯ ಗ್ರಂಥಾಲಯ ಮತ್ತು ಇದರ ವ್ಯಾಪ್ತಿಯಲ್ಲಿನ ೧೬ ಶಾಖಾ ಗ್ರಂಥಾಲಯಗಳಿಂದ) ದಿನಕ್ಕೆ ಕೇವಲ ೬೧೦ ಪುಸ್ತಕಗಳನ್ನು ಎರವಲು ಪಡೆಯುತ್ತಾರೆ! ಇಂತಹ ಅಂಕಿಅಂಶಗಳನ್ನು ಸರಿಯಾದ ಹಿನ್ನೆಲೆಯಲ್ಲಿ ಗ್ರಹಿಸದೆ ಪ್ರತ್ಯೇಕಿಸಿ ನೋಡಿದರೆ ಅವು ದಾರಿ ತಪ್ಪಿಸಲೂಬಹುದು. ಈ ಅಂಕಿಅಂಶಗಳನ್ನು ಸರಿಯಾಗಿ ಅರ್ಥೈಸಿ, ಮುನ್ನಡೆ ಅಥವ ಸಾಧನೆಯನ್ನು ಗುರುತಿಸಬೇಕಿದ್ದರೆ ಜನಸಂಖ್ಯೆಯಲ್ಲಿ ಸದಸ್ಯತ್ವದ ಪ್ರಮಾಣ (ಗ್ರಾಹಕರನ್ನು ತಲುಪುವ ಪ್ರಮಾಣ), ಒಟ್ಟು ಗ್ರಂಥಗಳಲ್ಲಿ ಎರವಲು ಪಡೆದ ಗ್ರಂಥಗಳ ಪ್ರಮಾಣ ಮತ್ತು ಈ ಎರಡೂ ಪ್ರಮಾಣಗಳನ್ನು ಇತರ

ಗ್ರಂಥಾಲಯಗಳ ಇಂತಹುದೆ ಪ್ರಮಾಣಗಳೊಂದಿಗೆ ಅಥವ ನಿಗದಿತ ಗುಣ ಮಟ್ಟದೊಂದಿಗೆ ಮತ್ತು ಇದೇ ಗ್ರಂಥಾಲಯಗಳ ಹಿಂದಿನ ವರ್ಷಗಳ ಪ್ರಮಾಣಗಳಿಗೆ ಹೋಲಿಸುವುದು ಗ್ರಂಥಾಲಯಗಳ ಮುನ್ನಡೆ, ದಕ್ಷತೆ ಮತ್ತು ಸಮರ್ಥತೆಯನ್ನು ಅರಿಯಲು ನೆರವಾಗುತ್ತದೆ. ಬ್ರಿಟನ್ನಿನ ಸಾರ್ವಜನಿಕ ಗ್ರಂಥಾಲಯಗಳಿಗೆ ಓದುಗರ ಭೇಟಿ ಮತ್ತು ಪುಸ್ತಕ ಎರವಲು ಇಳಿಮುಖವಾಗಿರುವ ಅಂಕಿಅಂಶಗಳನ್ನು ಪ್ರಕಟಿಸಿ ಚರ್ಚಿಸಿರಿವ ಮೇಲೆ ತಿಳಿಸಿದ Tim Coatesನ ವರದಿಯನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ.

---

* ಕನ್ನಡ ಪ್ರಭ, ನವೆಂಬೆರ್ ೨೬, ೨೦೦೪, ಪು. ೬.

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೬ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **; Phone:** 91-80-25084451; **Fax:** 91-80-25084476.